## ಧಾರವಾಡ ಚುರಮರಿ ಕಾರ್ಯಾಗಾರಕ್ಕೆ ನಿವೇಶನ ನೀಡುವ ಬಗ್ಗೆ

೨೪೯. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ಶಹರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ನಗರದ ಚುರಮರಿ ತಯಾರಿಕೆರಿಗಾಗಿ (ಕಾರ್ಖಾಗಾರದ) ಪ್ರತ್ಯೇಕ ನಿವೇಶನ ಇಲ್ಲದೆ ತೊಂದರೆ ಪಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಚುರಮರಿ ಮಾಡುವ ಕಾರ್ಯಾಗಾರಿಗಳ ಲೈಸೆನ್ಸ್ ಪಡೆದಿರುವವರ ಸಂಖ್ಯೆ ಎಷ್ಟು ? ಅವರಿಗೆ ನಿವೇಶನಗಳನ್ನು ಒದಗಿಸುವ ಬಗ್ಗೆ ಮಹಾನಗರಸಭೆ ಯಾವ ಕ್ರಮ ತೆಗೆದುಕೊಂಡಿದೆ.

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).—

ಅ) ಹೌದು,

ಆ) ಚುರಮರಿ ಮಾಡುವ ಕಾರ್ಖಾಗಾರಗಳ ಬಗ್ಗೆ ಕೇವಲ ೪ ಜನರು ಲಾಯಿಸೆನ್ಸ್ ಪಡೆದಿದ್ದಾರೆ. ಆದರೆ ಅನೇಕ ಜನರು ಅನಧಿಕೃತವಾಗಿ ಚುರಮರಿ ಭಟ್ಟಿಗಳನ್ನು ನಡೆಸುತ್ತಿದ್ದಾರೆ. ಅವುಗಳಿಂದ ಸುತ್ತುಮುತ್ತಲಿನ ಜನರಿಗೆ ಅನಾರೋಗ್ಯಕರವಾದ ವಾತಾವರಣ (ಮಾಲೀನ್ಯ) ಉಂಟಾಗುತ್ತಿರುವುದರಿಂದ ಅವರನ್ನು ಬೇರೆ ಜಾಗೆಗೆ ಸ್ಥಳಾಂತರಿಸಲು ಯೋಜಿಸಲಾಗುತ್ತಿದ್ದು, ನಿಜವಾದ ಭಟ್ಟಿದಾರಕರು ಯಾರು ಎಂಬುದನ್ನು ಗುರುತಿಸಲು ಪರಿಶೀಲಿಸಲಾಗುತ್ತಿದೆ,

## ಧಾರವಾಡದ ಕಲಾಭವನದಲ್ಲಿ ಅಳವಡಿಸಿದ ಸೌಂಡ್ ಸಿಸ್ಟಮ್ ಬಗ್ಗೆ

೨೫೨. ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ ಶಹರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದ ಕಲಾಭವನದಲ್ಲಿ ಕಟ್ಟಡದ ವಿನ್ಯಾಸದಿಂದ ಸೌಂಡ್ ಸಿಸ್ಟಮ್ ಚೆನ್ನಾಗಿ ಇಲ್ಲದಿರುವ ಬಗ್ಗೆ ಸರ್ಕಾರಕ್ಕೆ (ಮಹಾನಗರಸಭೆಯ ಮೂಲಕ) ದೋಷದ ವಿಷಯ ತಿಳಿದಿರುವುದೆ,

ಆ) ಹಾಗಾದರೆ ಅದರ ಉಪಯುಕ್ತತೆ ಜನತೆಗೆ ಹೆಚ್ಚಾಗುವಂತೆ ತೀವ್ರ ಸೌಂಡ್ ಸಿಸ್ಟಮ್‌ನ್ನು ಸುಧಾರಿಸಲು ಕ್ರಮ ತೆಗೆದುಕೊಳ್ಳಲಾಗುವುದೆ ?

ಇ) ಧಾರವಾಡದಲ್ಲಿರುವ ಬಯಲು ರಂಗ ಮಂದಿರ ಮೇಲಿನ ಚಾವಣಿ (ಹೊದಿಕೆ) ಇಲ್ಲದಿರುವುದರಿಂದ ಎಲ್ಲ ಕಾಲಗಳಲ್ಲಿ ಸಾರ್ವಜನಿಕರಿಗೆ ಉಪಯೋಗವಿಲ್ಲದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುವಂತೆ ಮೇಲಿನ ಚಾವಣಿ ಹಾಕಿಸುವ ಕಾರ್ಯವನ್ನು ಮಾಡಲಾಗುವುದೇ ?

ಶ್ರೀ ಆರ್. ವಿ. ದೇಶಪಾಂಡೆ (ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಕ್ರಮ ಕೈಕೊಳ್ಳಲಾಗುತ್ತಿದೆ. ಸೌಂಡ್ ಸಿಸ್ಟಮ್ ಸುಧಾರಿಸಲು ರೂ ೧.೬೦ ಲಕ್ಷ ರೂಗಳ ಅಂದಾಜು ಪತ್ರಿಕೆ ಮಂಜೂರಾಗಿದ್ದು ಹಣದ ಲಭ್ಯತೆಗನುಗುಣವಾಗಿ ಕೆಲಸವನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಇ) ಮತ್ತು ಈ) ಇದು ಬಯಲು ರಂಗ ಮಂದಿರವಾಗಿದ್ದು, ಮೇಲ್ಚಾವಣಿ ಹಾಕುವ ಅವಶ್ಯಕತೆ ಇರುವುದಿಲ್ಲ,

## ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ. ಹಣದ ಬಗ್ಗೆ

೨೫೭. ಶ್ರೀ ಎಂ. ಶಿವಣ್ಣ (ಹೆಚ್. ಡಿ. ಕೋಟೆ).—ಮಾನ್ಯ ವಾರ್ತಾ ವ್ಯವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಹಾಗೂ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು).—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಮೈಸೂರು ಜಿಲ್ಲಾಪರಿಷತ್ತಿಗೆ ವಿವಿಧ ಬಾಬುಗಳಿಗಾಗಿ ನೀಡಲಾದ ಹಣವೇಷ್ಟು ? (ಬಾಬುವಾರು ನೀಡಲಾದ ಹಣದ ವಿವರವನ್ನೊದಗಿಸುವುದು) ?

ಆ) ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ.ಯಿಂದ ತೆಗೆದುಕೊಂಡ ಕಾವಂಗಾರಿಗಳೆಷ್ಟು ? ಆಂದಿನಿಂದ ಇಂದಿನವರೆವಿಗೂ ಪ್ರತಿ ಸಾಲಿಗೂ ಬಿಡುಗಡೆಯಾದ ಹಣ ಎಷ್ಟು ? ಪ್ರತಿ ಸಾಲಿನಲ್ಲೂ ಖರ್ಚು ಮಾಡಲಾದ ಹಣ ಎಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಗ್ರಾಮೀಣ ಹಾಗೂ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಕ್ಕಳ ಮಂತ್ರಿಗಳು).—

ಆ) ವಿವರಗಳನ್ನು ಲಗತ್ತಿಸಿರುವ ತಃಖ್ತೆ ೧ ಮತ್ತು ೨ರಲ್ಲಿ ಕೊಟ್ಟಿರುತ್ತದೆ.

ಆ) ವಿವರಗಳನ್ನು ಲಗತ್ತಿಸಿರುವ ತಃಖ್ತೆ ೩ರಲ್ಲಿ ಕೊಟ್ಟಿರುತ್ತದೆ.

ತಖ್ತೆ–೧

ಸರ್ಕಾರದಿಂದ ಜಿಲ್ಲಾ ಪರಿಷತ್‌ಗೆ ವಿವಿಧ ಯೋಜನೆಗಳ ಅಡಿಯಲ್ಲಿ ೧೯೭೭–೮೮ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣದ ಶೀರ್ಷಿಕೆವಾರು ವಿವರಗಳು.

(ಲಕ್ಷ ರೂ.ಗಳಲ್ಲಿ)

| ಕ್ರಮ ಸಂಖ್ಯೆ | ವಿವಿಧ ಬಾಬುಗಳು | ಬಿಡುಗಡೆ ಮಾಡಿರುವ ಮೊಬಲಗು | |
|---|---|---|---|
| | | ಯೋಜನೆ | ಯೋಜನೇತರ |
| ೧ | ೨ | ೩ | ೪ |
| ೧. | ೨೦೫೯–ಲೋಕೋಪಯೋಗಿ ಕಾಮಗಾರಿ | — | ೮೬.೭೮೦ |
| ೨. | ೨೨೦೨–ಸಾಮಾನ್ಯ ಶಿಕ್ಷಣ (ಪ್ರಾಥಮಿಕ) | ೮೨.೯೫೦ | ೧೪೩೪.೫೬೦ |
| ೩. | ೨೨೦೨–೦೨–ಸಾಮಾನ್ಯ ಶಿಕ್ಷಣ (ಸೆಕೆಂಡರಿ) | ೨೧.೬೦೦ | ೬೯೨.೨೫೦ |
| ೪. | ೨೨೦೨–೦೪–ವಯಸ್ಕರ ಶಿಕ್ಷಣ | ೨೬.೨೭ | — |
| ೫. | ೨೨೦೪–ಕ್ರೀಡಾ ಕಾರ್ಯ | ೦.೪೮೦ | ೨.೦೪೦ |
| ೬. | ೨೨೧೦–ವೈದ್ಯಕೀಯ ಮತ್ತು ಜನಾರೋಗ್ಯ | ೯೫.೭೮೦ | ೮೬೪.೦೮೦ |
| ೭. | ೨೨೧೧–ಕುಟುಂಬ ಕಲ್ಯಾಣ | ೧೭೭.೮೨೯ | — |
| ೮. | ೨೨೧೫–ನೀರು ಪೂರೈಕೆ ಮತ್ತು ನೈರ್ಮಲ್ಯ | ೨೫೧.೧೩೦ | ೧೮.೬೫೦ |
| ೯. | ೨೨೧೬–ಗೃಹ ನಿರ್ಮಾಣ | | |
| | ೨೨೧೬ ಗೃಹ ನಿರ್ಮಾಣ ಮಂಡಲಿಯಿಂದ ಸಾಲ | ೧೮೦.೦೦೩ | ... |
| ೧೦. | ೨೨೨೫–ಹರಿಜನ ಗಿರಿಜನ ಹಿಂದುಳಿದ ವರ್ಗಗಳ ಕಲ್ಯಾಣ | ೫೭೯.೩೯೦ | ೨೮೯.೬೨೫ |
| ೧೧ | ೨೨೩೦–ಕಾರ್ಮಿಕ ಮತ್ತು ಉದ್ಯೋಗ ೦೨–ಸ್ಟೈಫೆಂಡರಿ | ೧೮.೬೦೦ | ... |
| ೧೨. | ೨೨೩೦–ಜೀತವಿಮುಕ್ತರಿಗೆ ಪರಿಹಾರ | ೨೨೧.೫೧೦ | ... |
| ೧೩. | ೨೨೮೫–೦೨–ಸಾಮಾಜಿಕ ಭದ್ರತೆ | ೧೨೪.೮೬೦ | ೫೧.೨೩೦ |
| ೧೪. | ೨೨೩೬–ಪೌಷ್ಟಿಕ ಆಹಾರ | ೮೪.೨೪೦ | ೫೩.೯೯೦ |
| ೧೫. | ೨೪೦೧–ಸಸ್ಯ ಸಂಗೋಪನೆ ವ್ಯವಸಾಯ | ೩೪.೯೮೨ | ೯೩.೧೯೦ |
| ೧೬. | ೨೪೦೧–ತೋಟಗಾರಿಕೆ | ೬.೮೩೫ | ೪೮.೫೦೦ |
| ೧೭. | ೨೪೦೨–ಭೂಸೇನಾ ಮತ್ತು ಜಲರಕ್ಷಣೆ | ೪೮.೫೯೪ | ೩೮.೯೯೦ |
| ೧೮. | ೨೪೦೩–ಪಶುಸಂಗೋಪನೆ | ೧೧.೫೫೦ | ೫೯ ೧೧೦ |
| ೧೯. | ೨೪೦೫–ವಿಮೆನುಗ್ಗಾರಿಕೆ | ೧೦.೩೪೮ | ೧೧.೪೦೨ |
| ೨೦. | ೨೪೦೬–ಅರಣ್ಯ ಮತ್ತು ವನ್ಯ ಜೀವನ | ೮೩.೧೫೦ | ... |
| ೨೧. | ೨೪೦೮–ಆಹಾರ ದಾಸ್ತಾನು ಮತ್ತು ಉಗ್ರಾಣ | ೫.೨೮೦ | ೪.೮೮೦ |
| ೨೨. | ೨೪೨೫–ಸಹಕಾರ | ೪೦.೩೯೬ | ೪೧.೨೫೧ |
| ೨೩. | ೨೫೦೧–ಗ್ರಾಮೀಣಾಭಿವೃದ್ಧಿ ವಿಶೇಷ ಕಾರ್ಯಕ್ರಮ | ೧೫೪.೬೦೪ | ... |

| | | | |
|---|---|---|---|
| ೨೪. | ೨೫೦೫-ಗ್ರಾಮೀಣ ಉದ್ಯೋಗ (ಎನ್.ಆರ್.ಇ.ಪಿ.) | ೩೧೫,೭೩೧ | ... |
| ೨೫. | ೨೫೦೫-ಬ್ಲಾಕ್‌ಬೋರ್ಡ್ ಕಾರ್ಯಕ್ರಮ-ಚಾಮರಾಜನಗರ ತಾ. | ೫೩.೬೧೦ | ... |
| ೨೬. | ೨೫೦೫-ಗ್ರಾಮೀಣ ಉದ್ಯೋಗ ಆರ್.ಎಲ್.ಇ.ಜಿ.ಪಿ. | ೧೯೧.೩೨೦ | ... |
| ೨೭. | ೨೫೦೫-ಗ್ರಾಮೀಣ ಉದ್ಯೋಗ ಆರ್.ಇ.ಜಿ.ಎಸ್. | ೧೬.೬೬೭ | ... |
| ೨೮. | ೨೫೦೫-ಗ್ರಾಮೀಣ ಉದ್ಯೋಗ (ಅಭಾವ ಪರಿಹಾರ) | ೯೫.೮೦೦ | ... |
| ೨೯. | ೨೫೦೬-ಭೂ ಸುಧಾರಣೆ | ೦.೧೨೦ | ... |
| ೩೦. | ೨೫೧೫-ಇತರೇ ಗ್ರಾಮೀಣ ಅಭಿವೃದ್ಧಿ-ತಲಾನುಧಾನ | ೨೦೪.೩೦೨ | ೪೬.೨೭೪ |
| ೩೧. | ೨೫೫೧ ಗುಡ್ಡಗಾಡು ಪ್ರದೇಶಗಳು-ಪಶ್ಚಿಮ ಘಟ್ಟ ಯೋಜನೆ | ೪೩.೯೧೦ | ... |
| ೩೨. | ೨೭೦೨-ಸಣ್ಣ ನೀರಾವರಿ-ಅಂತರ್ಜಲ | ೪.೦೮೦ | ೪.೯೨೦ |
| ೩೩. | ೨೭೦೨-ಸಣ್ಣ ನೀರಾವರಿ-ಲೋಕೋಪಯೋಗಿ | ೨೪,೮೪೦ | ೨೭.೪೦೦ |
| ೩೪. | ೨೮೧೦-ರೂಢಿಯಲ್ಲಿಲ್ಲದ ಇಂಧನ | ೪೯.೬೯೧ | ... |
| ೩೫. | ೨೮೫೧-ಗ್ರಾಮೋದ್ಯಮ ಮತ್ತು ಚಿಕ್ಕಪುಟ್ಟ ಉದ್ಯಮ-ರೇಷ್ಮೆ | ೮೩.೯೪೦ | ೧೮.೩೪೦ |
| ೩೬. | ೨೮೫೧-ಗ್ರಾಮೋದ್ಯಮ ಮತ್ತು ಚಿಕ್ಕಪುಟ್ಟ ಉದ್ಯಮ ಪಾಧಿ | ೧೯.೧೨೦ | ೨.೪೧೦ |
| ೩೭. | ೨೮೫೨- ಉದ್ಯಮ ಸಾಮಾನ್ಯ | ... | ೫.೪೭೦ |
| ೩೮. | ೩೦೫೪-ಮತ್ತಿತ್ತರ ೫೦೫೪ ರಸ್ತೆ ಮತ್ತಿತ್ತರ ಸೇತುವೆಗಳು | ೭೯.೫೫೦ | ೧೨೫.೬೬೦ |
| ೩೯. | ೩೪೫೧-ಸಚಿವಾಲಯ ಆರ್ಥಿಕ | ೪.೨೦೪ | ೧.೯೧೦ |
| ೪೦. | ೨೨೪೫-ಪ್ರಾಕೃತಿಕ ವಿಕೋಪಗಳಿಗೆ ಪರಿಹಾರ | ೨.೦೮೦ | ... |
| ೪೧. | ೩೪೫೬-ಸರ್ವವಸ್ತು ಭಂಡಾರ | ೮.೦೧೦ | ... |
| ೪೨. | ೨೦೭೦-೮೦೦-೦೪-ಇತರೇ ಆಡಳಿತ ಸೇವೆ | ... | ೦.೭೫೦ |
| ೪೩. | ೨೫೧೫-ಇತರೇ ಗ್ರಾಮೀಣ ಅಭಿವೃದ್ಧಿ ಅಂತ್ಯೋದಯ | ೭.೧೦೦ | ... |
| ೪೪. | ೨೫೧೫-ಇತರೇ ಗ್ರಾಮೀಣ ಅಭಿವೃದ್ಧಿ (೧೦೦ ಬಾವಿಗಳ ಯೋಜನೆ) | ೨೭.೫೦೦ | ... |
| ೪೫. | ೨೨೦೨-೦-೧೯೧-೦೧-ಸಾಮಾನ್ಯ ಶಿಕ್ಷಣ ಸ್ವಸಂಸ್ಥೆಗಳು | ೩.೨೩೦ | ೦.೨೩೦ |
| ೪೬. | ೨೨೧೫-ಗ್ರಾಮಾಂತರ ಸ್ವೈರ್ಮಲ್ಯ (ಆರ್.ಎಲ್.ಇ.ಜಿ.ಪಿ.) ಮೊದಲಾದ | ೫,೩೮೮ | ... |
| ೪೭. | ೨೪೦೧-ಸಸ್ಯ ಸಂಗೋಪನೆ ಕೃಷಿಕರಿಗೆ ಬೆಳೆಯಲು ಪರಿಹಾರ | ೨೭.೫೦೦ | ... |
| ೪೮. | ೨೫೧೫-ಡಿಸ್ಟ್ರಿಕ್ಟ್ ಸಬ್ ಪ್ಲಾನ್ | ೨೧.೨೭೦ | ... |
| ೪೯. | ೩೫೫೬-ಸಹಕಾರ | ೦.೪೦೨ | ... |
| | | ೧.೦೫ | ೦೫೦೫.೪೯೦ |

ತಃಪ್ಪೆ:–೨

ಸರ್ಕಾರದಿಂದ ಜಿಲ್ಲಾ ಪರಿಷತ್‌ಗೆ ವಿವಿಧ ಯೋಜನೆಗಳ ಅಡಿಯಲ್ಲಿ ೧೯೮೭–೮೮ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣದ ಶೀರ್ಷಿಕೆವಾರು ವಿವರಗಳು.

(ಲಕ್ಷ ರೂ. ಗಳಲ್ಲಿ)

| ಕ್ರಮ ಸಂಖ್ಯೆ | ವಿವಿಧ ಬಾಬುಗಳು | ಬಿಡುಗಡೆ ಮಾಡಿರುವ ಮೊಬಲಗು | |
|---|---|---|---|
| | | ಯೋಜನೆ | ಯೋಜನೇತರ |
| ೧ | ೨ | ೩ | ೪ |
| ೧ | ೨೦೫೯ ಲೋಕೋಪಯೋಗಿ ಕಾಮಗಾರಿ | — | ೯೨.೭೯೦ |
| ೨ | ೨೨೦೨–೦೧ ಸಾಮಾನ್ಯ ಶಿಕ್ಷಣ ಪ್ರಾಥಮಿಕ | ೬೨.೮೦೦ | ೧೪೦೯.೦೪೦ |
| ೩ | ೨೨೦೨–೦೨ — ಅದೇ — ಸೆಕೆಂಡರಿ | ೨೯ ೮೬೦ | ೫೩೦.೫೫೦ |
| ೪ | ೨೨೦೨–೦೪ ಪಯಸ್ಕರ ಶಿಕ್ಷಣ | ೧೬.೪೬೮ | — |
| ೫ | ೨೨೦೨ — ಬಿ. ಇ. ೮೧ | ೩.೧೨– | ೧.೩೫೦ |
| ೬ | ೨೨೦೨–೦೪–೨೨ | ೧೨.೫೯೦ | — |
| ೭ | ೨೨೦೨ ಸಾ. ಶಿ — ೦೫ ಭಾಷಾಭಿವೃದ್ಧಿ | — | ೧೨.೮೬೦ |
| ೮ | ೨೨೦೪– ಕ್ರೀಡಾ ಕಾರ್ಯಕ್ರಮಗಳು ಮತ್ತು ಯುವ ಜನ ಸೇವೆ | ೧.೨೬೦ | ೧.೯೮೦ |
| ೯ | ೨೨೧೦–ವೈದ್ಯಕೀಯ ಮಂತ್ತು ಜನಾರೋಗ್ಯ | ೭೫.೯೧೦ | ೩೨೨.೧೨೦ |
| ೧೦ | ೨೨೧೧ ಕುಟುಂಬ ಕಲ್ಯಾಣ | ೧೦೭.೬೦೫ | — |
| ೧೧ | ೨೨೧೫ – ನೀರು ಪೂರೈಕೆ ಮತ್ತು ನೈರ್ಮಲ್ಯ ೦೧ ಪ ಸ | ೧೨೩.೫೬೦ | ೫.೨೨೦ |
| ೧೨ | ೨೨೧೬ - ಗೃಪ ನಿರ್ಮಾಣ ೮೦ ಸಾಮಾನ್ಯ | ೫೯.೩೧೦ | — |
| ೧೩ | ೨೨೫೫ – ಹರಿಜನ ಮತ್ತು ಗಿರಿಜನ ಹಾಗೂ ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | ೨೩೯.೧೧೭ | ೨೯೪.೩೯೦ |
| ೧೪ | ೨೨೩೦ – ಕಾರ್ಮಿಕ ಮತ್ತು ಉದ್ಯೋಗ–೦೧ ಕಾರ್ಮಿಕ ಜೀತ ವಿಮುಕ್ತರು | ೨೦೮.೫೫೦ | — |
| ೧೫ | ೨೨೩೦ – ಕಾರ್ಮಿಕ ಮತ್ತು ಉದ್ಯೋಗ ೦೧– ಸ್ಟೈಪೆಂಡರಿ ಭತ್ಯೆ | ೧೨.೪೦೦ | — |
| ೧೬ | ೨೨೩೫ – ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ | ೧೦೦.೩೪೦ | ೩೩.೧೨೦ |
| ೧೭ | ೨೨೩೬ – ಪೌಷ್ಟಿಕ ಆಹಾರ | ೪೨.೩೯೦ | ೭೮.೫೭೦ |
| ೧೮ | ೨೪೦೧ – ಸಸ್ಯ ಸಂಗೋಪನೆ–ವ್ಯವಸಾಯ | ೨೦.೯೯೫ | ೭೨.೨೭೦ |
| ೧೯ | ೨೪೦೧–೦೧–೦೨–ಸಸ್ಯ ಸಂಗೋಪನೆ–ತೋಟಗಾರಿಕೆ | ೫.೪೯೦ | ೩೧.೨೩೦ |
| ೨೦ | ೨೪೦೨ – ಭೂ ಸಾರ ಮತ್ತು ಜಲರಕ್ಷಣೆ | ೧೧.೬೦೦ | ೨೨.೯೫೦ |
| ೨೧ | ೨೪೦೩ – ಪಶುಸಂಗೋಪನೆ | ೭.೪೭೦ | ೭೧.೮೨೦ |
| ೨೨ | ೨೪೦೫ – ಮಿಾನುಗಾರಿಕೆ | ೩.೬೯೦ | ೧೩.೬೦೦ |
| ೨೩ | ೨೪೦೬ – ಅರಣ್ಯ ಮತ್ತು ವನ್ಯ ಜೀವನ | ೬೩.೧೬೭ | — |
| ೨೪ | ೨೪೦೮ – ಆಹಾರ ದಾಸ್ತಾನು ಮತ್ತು ಉಗ್ರಾಣ | ೫.೨೨೦ | ೬.೦೫೦ |
| ೨೫ | ೨೪೨೫ – ಸಹಕಾರ | ೧೯.೭೬೦ | ೩.೪೨೦ |
| ೨೬ | ೨೫೦೧ – ಇತರೆ ಗ್ರಾಮೀಣಾಭಿವೃದ್ಧಿ ಮತ್ತು ಉಸ್ತುವಾರಿ ಘಟಕ | ೬೫.೫೩೫ | — |
| ೨೭ | ೩೫೦೫ – ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆ | ೧೮೦.೬೩೧ | — |

| | | | |
|---|---|---|---|
| ೨೮ | ೨೫೦೫ – ಆರ್. ಎಲ್. ಇ.ಜಿ. ಪಿ. | ೭೧.೯೪೮ | — |
| ೨೯ | ೨೫೦೫ – ಆರ್. ಇ. ಜಿ. ಎಸ್. | — | ... |
| ೩೦ | ೨೫೦೫ – ಅಭಾವ | — | — |
| ೩೧ | ೨೫೧೫ – ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು | ೧೪೫.೨೭೦ | ೪೮.೪೨೦ |
| ೩೨ | ೨೫೫೧ – ಪಶ್ಚಿಮ ಘಟ್ಟ ಯೋಜನೆ | ೨೪.೦೦೦ | — |
| ೩೩ | ೨೭೦೨ – ಸಣ್ಣ ನೀರಾವರಿ (ಅಂತರ್ಜಲ) | ೧.೭೫೦ | ೪.೨೮೦ |
| ೩೪ | ೨೭೦೨ – ಸಣ್ಣ ನೀರಾವರಿ (ಲೋಕೋಪಯೋಗಿ) | ೨೯.೩೧೦ | ೧೪.೮ ೦ |
| ೩೫ | ೨೮೧೦ – ರೂಡಿಯಲ್ಲಿ ಇಲ್ಲದ ಇಂಧನ ಮೂಲಗಳು | ೮.೧೯೦ | — |
| ೩೬ | ೨೮೫೧ – ಗ್ರಾಮೀಣ ಮತ್ತು ಚಿಕ್ಕಪುಟ್ಟ ಉದ್ಯಮ–ಆದೇ.ಖಾದಿ–ರೇಷ್ಮೆ | ೫–೭೮೦ | — |
| ೩೭ | ೩೪೫೧ – ಸಚಿವಾಲಯದ ಆರ್ಥಿಕ ಸೇವೆ | ೭೪.೨೮೦ | ೧೧.೬೧೦ |
| ೩೮ | ರಸ್ತೆ ಮತ್ತು ಸೇತುವೆಗಳು | ೪೬.೫೩೦ | ೧೧೭.೦೦೦ |
| ೩೯ | ೨೮೫೨ – ಉದ್ಯಮ ೮೦ ಸಾಮಾನ್ಯ | — | ೩.೦೬೦ |
| ೪೦ | ೨೨೪೫ – ರಸ್ತೆ ಮತ್ತು ಕೆರೆ ದುರಸ್ತಿ | — | ೫೧.೦೦೦ |

ತಃಖೆ:–೩

| ವಿವರಗಳು | ಎಸ್ ಆರ್.ಇ.ಪಿ. | | ಆರ್.ಎಲ್.ಇ.ಜಿ.ಪಿ. | |
|---|---|---|---|---|
| | ೧೯೮೭–೮೮ | ೧೯೮೮–೮೯ (ಜನವರಿ ೮೯ರ ವರೆಗೆ) | ೧೯೮೭–೮೮ | ೧೯೮೮–೮೯ (ಜನವರಿ ೮೯ರ ವರೆಗೆ) |
| ೧. ಕೈಗೊಂಡ ಕಾಮಗಾರಿ ಸಂಖ್ಯೆ | ೧೬೭೧ | ೨೨೦೮ | ೨೨೩೫ | ೧೪೬೧ |
| ೨. ಪ್ರತಿ ಸಾಲಿಗೂ ಬಿಡುಗಡೆಯಾದ ಹಣ | ೩೫೬.೧೩೭(ಲಕ್ಷ) | ೨೯೪.೪೨೧(ಲಕ್ಷ) | ೨೮೭.೯೩೦(ಲಕ್ಷ) | ೨೨೮.೬೨೩(ಲಕ್ಷ) |
| ೩. ಖರ್ಚು ಮಾಡಿದ ಹಣ | ೨೪೫.೮೭೦(ಲಕ್ಷ) | ೧೬೩.೯೬೨(ಲಕ್ಷ) | ೨೨೩.೬೫೯(ಲಕ್ಷ) | ೧೪೭.೩೫೬(ಲಕ್ಷ) |

## ಆಲಸೂರು ಕೆರೆ ದಂಡೆ ಬಿರುಕು ಬಿಟ್ಟಿರುವ ಬಗ್ಗೆ

೨೩೫. ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).—ಪೌರಾಡಳಿತ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ವರ್ಷ ಮಳೆಗಾಲದಲ್ಲಿ ಆಲಸೂರು ಕೆರೆ ದಂಡೆ ಬಿರುಕು ಬಿಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಕೆರೆಯ ದಂಡೆಯನ್ನು ದುರಸ್ತಿ ಮಾಡಿಸಲಾಗಿದೆಯೇ ?

ಇ) ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ? ಹಾಗೂ ಇದನ್ನು ಯಾವಾಗ ದುರಸ್ತಿ ಮಾಡಲಾಗುವುದು ?